# “ಯೂರೋ”ವನ್ನು ಅಧಿಕೃತ ಹಣವಾಗಿ ಅಳವಡಿಸಿಕೊಂಡ ಬಲ್ಗೇರಿಯಾ

**ಇದೀಗ ಸುದ್ದಿಯಲ್ಲಿದೆ:**

**ಇತ್ತೀಚೆಗೆ, ಬಾಲ್ಕನ್ ರಾಷ್ಟ್ರವಾದ ಬಲ್ಗೇರಿಯಾವು ಐರೋಪ್ಯ ಒಕ್ಕೂಟದ (EU) ಏಕೀಕೃತ ಹಣಕಾಸು ವ್ಯವಸ್ಥೆಯಾದ ‘ಯೂರೋ’ವನ್ನು ಅಧಿಕೃತವಾಗಿ ಅಳವಡಿಸಿಕೊಂಡಿದೆ.**

## ‘ಐರೋಪ್ಯ ಒಕ್ಕೂಟ’ ದ ಬಗ್ಗೆ

- **ಮಾಸ್ಟ್ರಿಚ್ ಒಪ್ಪಂದ, 1992:-** ಈ ಒಪ್ಪಂದದ ಮೂಲಕ ಐರೋಪ್ಯ ಒಕ್ಕೂಟವು ಸ್ಥಾಪನೆಯಾಯಿತು
- **ಯುರೋಪಿನ ಆರ್ಥಿಕ ಮತ್ತು ಹಣಕಾಸು ಒಕ್ಕೂಟ:-** ಇದು **ಸಾಮಾನ್ಯ ಆರ್ಥಿಕ ಮತ್ತು ಹಣಕಾಸು ಒಕ್ಕೂಟದ** ರಚನೆಯ ಮಾರ್ಗವನ್ನು ಸುಗಮಗೊಳಿಸಿತು.
- **ಯುರೋಪಿಯನ್ ಸೆಂಟ್ರಲ್ ಬ್ಯಾಂಕ್ (ECB):-** ಇದು ಏಕೀಕೃತ ಕೇಂದ್ರೀಯ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿದೆ.
- **‘ಯೂರೋ’:-** ಇದು ಏಕೈಕ ಕಾನೂನುಬದ್ಧ ಚಲಾವಣಾ ಹಣಕಾಸಾಗಿ ಒಪ್ಪಿತವಾದ ಸಾಮಾನ್ಯ ಹಣಕಾಸಿನ ಅಳವಡಿಕೆಗೆ ಅವಕಾಶ ಮಾಡಿಕೊಟ್ಟಿತು.
- **ಪ್ರಸ್ತುತ, 27 ಸದಸ್ಯ ರಾಷ್ಟ್ರಗಳು:- ಜುಲೈ 1, 2013ರಂದು** ಐರೋಪ್ಯ ಒಕ್ಕೂಟಕ್ಕೆ ಕೊನೆಯದಾಗಿ ಸೇರಿಕೊಂಡ ದೇಶ ಕ್ರೊಯೇಷಿಯಾ, 28ನೇ ಸದಸ್ಯ ರಾಷ್ಟ್ರವಾಯಿತು.
- **‘ಯೂರೋಜೋನ್’:-** ಇದು ಒಂದು ಸಾಮಾನ್ಯ ಭೌಗೋಳಿಕ ಮತ್ತು ಆರ್ಥಿಕ ಪ್ರದೇಶವನ್ನು ಹೊಂದಿದೆ.

## ಉಳಿದ 6 ರಾಷ್ಟ್ರಗಳು ತಮ್ಮದೇ ಆದ ಅಧಿಕೃತ ಹಣಕಾಸನ್ನು ಬಳಸುತ್ತಿವೆ.

- ನಾಲ್ಕು ಪುಟ್ಟ ರಾಷ್ಟ್ರಗಳಾದ ಅಂಡೋರಾ, ಮೊನಾಕೊ, ವ್ಯಾಟಿಕನ್ ಸಿಟಿ ಮತ್ತು ಸ್ಯಾನ್ ಮರಿನೋ ಸಹ ಐರೋಪ್ಯ ಒಕ್ಕೂಟದೊಂದಿಗಿನ ಒಪ್ಪಂದಗಳ ಮೂಲಕ ಯೂರೋ ಅನ್ನು ಬಳಸುತ್ತಿವೆ.
- **2023ರಲ್ಲಿ ಕ್ರೊಯೇಷಿಯಾ** ಯೂರೋಜೋನ್‌ಗೆ ಸೇರಿ ಈ ಯೂರೋ ಅಳವಡಿಸಿಕೊಂಡ 20ನೇ ಸದಸ್ಯ ರಾಷ್ಟ್ರವಾಗಿದೆ.

## ‘ಯೂರೋಜೋನ್’ನ ಬಗ್ಗೆ:

- ಅಧಿಕೃತವಾಗಿ ಇದನ್ನು **ಯೂರೋ ಪ್ರದೇಶ** ಎನ್ನುವರು, **ಯೂರೋವನ್ನು ತಮ್ಮ ಅಧಿಕೃತ ಹಣಕಾಸನ್ನಾಗಿ** ಸಂಪೂರ್ಣವಾಗಿ ಅಳವಡಿಸಿಕೊಂಡಿರುವ ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಭೌಗೋಳಿಕ ಮತ್ತು ಆರ್ಥಿಕ ಪ್ರದೇಶವಾಗಿದೆ.
- **ರಚನೆ:-** ಇತ್ತೀಚಿನ, ಬಲ್ಗೇರಿಯಾದ ಸೇರ್ಪಡೆಯು ಐರೋಪ್ಯ ಒಕ್ಕೂಟದ 27 ಸದಸ್ಯ ರಾಷ್ಟ್ರಗಳ ಪೈಕಿ, ಯೂರೋಜೋನ್ ಸೇರಿದ 21ನೇ ರಾಷ್ಟ್ರವನ್ನಾಗಿ ಮಾಡಿದೆ.




## ‘ಬಲ್ಗೇರಿಯಾ’ ದೇಶದ ಬಗ್ಗೆ:

- **ಸ್ಥಳ:-** ಇದು ಆಗ್ನೇಯ ಯುರೋಪಿನ ಬಾಲ್ಕನ್ ಪರ್ಯಾಯ ದ್ವೀಪದ ಪೂರ್ವ ಭಾಗದಲ್ಲಿ ನೆಲೆಗೊಂಡಿರುವ ದೇಶವಾಗಿದೆ.
- **ನೆರೆಹೊರೆ ರಾಷ್ಟ್ರಗಳು:-** ಇಲ್ಲಿನ ಡ್ಯಾನ್ಯೂಬ್ ನದಿಯು ಗಡಿಯ ಬಹುತೇಕ ಭಾಗವನ್ನು ರೂಪಿಸುತ್ತದೆ.
- 1. ಉತ್ತರದ ಗಡಿಯಲ್ಲಿ **ರೊಮೇನಿಯಾ** ದೇಶವಿದ್ದು,
  2. ಪೂರ್ವಕ್ಕೆ **ಕಪ್ಪು ಸಮುದ್ರ,**
  3. ದಕ್ಷಿಣಕ್ಕೆ **ಟರ್ಕಿ ಮತ್ತು ಗ್ರೀಸ್,**
  4. ನೈಋತ್ಯಕ್ಕೆ **ಉತ್ತರ ಮ್ಯಾಸಿಡೋನಿಯಾ**
  5. ಪಶ್ಚಿಮಕ್ಕೆ **ಸರ್ಬಿಯಾ**
- **ರಾಜಧಾನಿ:-** ಸೋಫಿಯಾ.